**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 856/2018**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 03**

**ದಿನಾಂಕಃ 17.12.2025** **ಸಿಡಬ್ಲ್ಯೂ 01**

| | |
|---|---|
| ಹೆಸರು | ಸುನಿತಾ |
| ಗಂಡನ ಹೆಸರು | ರಾಮಕೃಷ್ಣ |
| ವಯಸ್ಸು | 40 ವರ್ಷ |
| ಉದ್ಯೋಗ | ಸಂಗೀತ ಶಿಕ್ಷಕಿ |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.13 ನನ್ನ ಗಂಡ. ಮೃತ ಚಂದ್ರಶೇಖರ ಮತ್ತು ಸಂತೋಷಿ ನನ್ನ ಸ್ನೇಹಿತರು. ಈಗ ನ್ಯಾಯಾಲಯದಲ್ಲಿರುವ ಆರೋಪಿಯನ್ನು ಈ ಮೊದಲು ಠಾಣೆಯಲ್ಲಿ ನೋಡಿರುತ್ತೇನೆ. ದಿಃ 23.05.2018 ರಂದು ನಾನು, ನನ್ನ ಗಂಡ ಚಾಸಾ.13, ಮೃತ ಚಂದ್ರಶೇಖರ ಮತ್ತು ಸಂತೋಷಿ ಬೆಂಗಳೂರಿನಿಂದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ್ ಗೆ ನಮ್ಮ ಐ 20 ಕಾರ್ ನಂ. ಕೆಎ 03 ಎಂ ಟಿ 4765 ರಲ್ಲಿ ಒಂದು ಸಂಗೀತ ಕಾರ್ಯಕ್ರಮಕ್ಕೆ ಹೋಗುತ್ತಿದ್ದೆವು. ಹನಗವಾಡಿಯ ಎನ್ ಹೆಚ್ 4 ಹತ್ತಿರ ಒಬ್ಬ ಲಾರಿ ಚಾಲಕ ಲಾರಿಗೆ ಯಾವುದೇ ಸೂಚನಾ ಫಲಕ ಇಲ್ಲದೇ ಲಾರಿಯನ್ನು ರಸ್ತೆಯಲ್ಲಿ ನಿಲ್ಲಿಸಿದ್ದರು. ನಾವು ಬೆಂಗಳೂರನ್ನು ರಾತ್ರಿ 10.00 ಗಂಟೆಗೆ ಬಿಟ್ಟಿದ್ದೆವು. ಹನಗವಾಡಿಯ ಎನ್ ಹೆಚ್ 4 ಹತ್ತಿರ ಬಂದಾಗ ರಾತ್ರಿ 2.30 –3.00 ಗಂಟೆಯಾಗಿತ್ತು. ಸದರಿ ಲಾರಿಗೆ ಯಾವುದೇ ಸೂಚನಾ ಫಲಕಗಳು ಇಲ್ಲದ ಕಾರಣ ನಮ್ಮ ಕಾರು ಸದರಿ ಲಾರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತ ಸಂಬವಿಸಿತ್ತು. ನನ್ನ ಸ್ನೇಹಿತರಾದ ಚಂದ್ರಶೇಖರ ಮತ್ತು ಸಂತೋಷಿರವರಿಗೆ ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲಿ ಮೃತ ಪಟ್ಟರು. ನನಗೆ ಬಲಗೈ ಮತ್ತು ಎಡಕಿವಿಗೆ ಪೆಟ್ಟಾಗಿ ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ಚಾಸಾ.13 ರವರಿಗೂ ಸಹ ಕಣ್ಣಿಗೆ ತೀವ್ರ ಪೆಟ್ಟಾಗಿದ್ದು ಮೈಮೇಲೆ ಸಣ್ಣ ಪುಟ್ಟ ಗಾಯಗಳಾಗಿದ್ದವು. ಮೃತ ಚಂದ್ರಶೇಖರ ಮತ್ತು ಸಂತೋಷಿರವರನ್ನು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ನನ್ನನ್ನು ಹಾಗೂ ಚಾಸಾ.13 ರವರನ್ನು ಆಂಬುಲೆನ್ಸ ನಲ್ಲಿ ದಾವಣಗೆರೆ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದರು. ಅದೇ ದಿನ ಬೆಳಿಗ್ಗೆ ಪೊಲೀಸರು ಆಸ್ಪತ್ರೆಗೆ ಬಂದು ನಮ್ಮ ಹೇಳಿಕೆಗಳನ್ನು ಪಡೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಹೇಳಿಕೆಯನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಮಾರನೇ ದಿನ ದಿಃ 25.05.2018 ರಂದು ಲಾರಿ ಚಾಲಕ ಠಾಣೆಗೆ ಬಂದು ಹಾಜರಾಗಿದ್ದನು. ಆ ದಿನ ಲಾರಿ ಚಾಲಕ ಠಾಣೆಯಲ್ಲಿದ್ದರು. ಅದೇ ವ್ಯಕ್ತಿ ಈಗ ನ್ಯಾಯಲಯದಲ್ಲಿ ಇದ್ದಾರೆ. ಈ ವಿಚಾರವಾಗಿ ನಾನು ಹೇಳಿಕೆ ನೀಡಿದ್ದೇನೆ. ಅದೇ ದಿನ ದಿಃ

25.05.2018 ರಂದು ಇಂಡಿಮಿನಿಟಿ ಬಾಂಡ್ ನೀಡಿ ನಮ್ಮ ಕಾರನ್ನು ಬಿಡಿಸಿಕೊಂಡಿರುತ್ತೇವೆ. ಸಾಕ್ಷಿಯು ಗುರುತಿಸಿದ ಇಂಡಿಮಿನಿಟಿ ಬಾಂಡ್ ನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ. 2 (ಎ) ಎಂದು ಗುರುತಿಸಲಾಯಿತು. ಅಪಘಾತ ಚಾಲಕ ಲಾರಿಗೆ ಯಾವುದೇ ಇಂಡಿಕೇಟರ್ ಅಥವಾ ಸೂಚನಾ ಫಲಕ ಹಾಕದ ಕಾರಣ ಆತನ ತಪ್ಪಿನಿಂದ ಸಂಭವಿಸಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ